ಅಜ್ಞಾನವನ್ನೂ ಡಾಂಭಿಕತೆಯನ್ನೂ ಪ್ರದರ್ಶಿಸಿದೆ. ಮಾನವ-ಪ್ರಕೃತಿಯ ಪ್ರಜ್ಞಾತೀತ ಮುಖಗಳನ್ನೂ ನಿಯಮಗಳನ್ನೂ ತಿಳಿಯಲಾರದೆ ಪಾಶ್ಚಾತ್ಯ ಮನಶ್ಶಾಸ್ತ್ರ ನಿಶ್ಶಕ್ತವಾಗಿ ಸೋಲುತ್ತದೆ. ಎಲ್ಲಿ ಯೂರೋಪಿನ ವಿಜ್ಞಾನ ಹಿಂದೇಟು ಹಾಕಿದೆಯೋ ಅಲ್ಲಿ ಭಾರತೀಯ ಮನಶ್ಶಾಸ್ತ್ರ ಬಂದು ಉಚ್ಚತರ ಸ್ತರದ ಇರುವಿಕೆ ಮತ್ತು ಅನುಭವಗಳನ್ನು ಅರ್ಥೈಸಲು, ಚಿತ್ರಿಸಲು ಮತ್ತು ಬೋಧಿಸಲು ಆರಂಭಿಸುತ್ತವೆ.

ಧರ್ಮ ಮಾತ್ರವೇ, ಅದರಲ್ಲಿಯೂ ಭಾರತದ ಋಷಿಗಳ ಧರ್ಮವೇ, ವಿಶಿಷ್ಟವಾಗಿ ಮಾನವ ಮನಸ್ಸಿನ ಸೂಕ್ಷ್ಮ ಮತ್ತು ರಹಸ್ಯ ಕಾರ್ಯಗಳನ್ನು ಅರ್ಥಮಾಡಿಕೊಳ್ಳಬಲ್ಲುದು, ಮತ್ತು ತನ್ಮೂಲಕ ಅನಾಧ್ಯಾತ್ಮಿಕ ಆಸೆಗಳನ್ನು ಅತಿಕ್ರಮಿಸಿ ಸತ್ಯವಿರುವುದೊಂದೇ, ಉಳಿದುದೆಲ್ಲವೂ ಮಾಯಾಕಲ್ಪಿತ ಎಂಬ ಸಾಕ್ಷಾತ್ಕಾರಕ್ಕೆ ಆಸ್ಪದ ಮಾಡುವುದು." ಹೀಗೆ ಸ್ವಾಮಿ ವಿವೇಕಾನಂದರು ವಿಜ್ಞಾನವನ್ನು ಅರ್ಥ ಮಾಡಿಕೊಂಡಿದ್ದುದು ಮಾತ್ರವಲ್ಲದೆ, ಅದರ ಇತಿ-ಮಿತಿಗಳನ್ನೂ ಅರ್ಥ ಮಾಡಿಕೊಂಡಿದ್ದರು.

**ಉಪಸಂಹಾರ**

ಸತ್ಯ ಒಂದೇ. ಅದನ್ನು ವಿಜ್ಞಾನಿಯು ಇಂದ್ರಿಯಗೋಚರ ವಸ್ತು-ವಿಷಯಗಳ ಮೂಲಕ ಅಧ್ಯಯನ ಮಾಡುವುದನ್ನು ವಿಜ್ಞಾನವೆನ್ನುತ್ತೇವೆ ; ಇಂದ್ರಿಯಗಳನ್ನೂ ಮೀರಿಹೋಗಿ ಅದೇ ಸತ್ಯವನ್ನು ಅರಿಯುವ ಪ್ರಯತ್ನ ಧರ್ಮವಾಗುತ್ತದೆ. ಸ್ವಾಮಿ ವಿವೇಕಾನಂದರು ಸತ್ಯದ ಈ ಎರಡು ಮುಖಗಳನ್ನೂ ಕಂಡವರು. ಅವರ ಕಾಲದ ನಂತರ ಸ್ವಾಮೀಜಿಯನ್ನು ನೆನೆಯುವಾಗ ಮಿಸ್ ಜೋಸೆಫಿನ್ ಮೆಕ್‌ಲೌಡ್ ಹೇಳುತ್ತಾಳೆ: "ನಾನು ಕೇಳಿದ ಅವರ ಮೊದಲ ಭಾಷಣದಲ್ಲಿ ಮೊದಲ ವಾಕ್ಯ ಸತ್ಯವಾಗಿದ್ದಿತು. ಎರಡನೆಯ ವಾಕ್ಯ ಸತ್ಯವಾಗಿದ್ದಿತು. ಮೂರನೆ ವಾಕ್ಯ ಸತ್ಯವಾಗಿದ್ದಿತು. ಆಮೇಲೆ ನಾನು ಅವರೊಡನೆ ಇರುತ್ತಿದ್ದಾಗ ಅವರು ನುಡಿದ ಪ್ರತಿಮಾತೂ ಸತ್ಯವಾಗಿದ್ದಿತು."

ಸ್ವಾಮಿ ವಿವೇಕಾನಂದರು ಸತ್ಯದ ಆರಾಧಕರಾಗಿದ್ದುದರಿಂದಲೇ ಅವರಿಗೆ ವೈಜ್ಞಾನಿಕ ಮನೋಭಾವ ಸ್ವಾಭಾವಿಕವಾಗಿಯೇ ಮೈಗೂಡಿದ್ದಿತು. ❋

# "ವಚನವೇದ" ದ ಓದು ಅಧ್ಯಯನಯೋಗ

**ಕೋ. ಚೆನ್ನಬಸಪ್ಪ**

"ಅಧ್ಯಯನಯೋಗ"ವೆಂಬ ಒಂದು ಹೊಸ ಸಾಧನೆಯ ವಿಧಾನವನ್ನು ಪರಿಚಯಿಸಿಕೊಟ್ಟಿರುವ ಶ್ರೀ ಕೋ. ಚೆನ್ನಬಸಪ್ಪನವರು ನಿವೃತ್ತ ನ್ಯಾಯಾಧೀಶರು ಮತ್ತು ಹಲವಾರು ಆಧ್ಯಾತ್ಮಿಕ ಕೃತಿಗಳನ್ನು ರಚಿಸಿ ಕನ್ನಡ ಓದುಗರಿಗೆ ಚಿರಪರಿಚಿತರಾಗಿರುವರು.

"ಶ್ರೀರಾಮಕೃಷ್ಣ ವಚನವೇದ" ಗ್ರಂಥಕ್ಕೆ ಕುವೆಂಪು ಮುನ್ನುಡಿ ಬರೆಯುತ್ತಾ: "......ಯಾವ ಮನೆಯಲ್ಲಿ ಈ 'ವಚನವೇದ' ವಿರುತ್ತದೆಯೊ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿಯುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೇ ಧರಿಸುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೇ ಈಂಟುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ; ದಿವ್ಯಜ್ಞಾನದ ಓಗರ .... ಕತ್ತಲಲ್ಲಿ ದೀಪ, ದಾರಿಗೆ ಊರುಗೋಲು, ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ. ಇಲ್ಲಿ ವೇದ ವೇದಾಂತದ ಸಾರವಿದೆ...."

ಹೀಗೆ ಮಹಾಕವಿ ಗುರುಮಹಾರಾಜರಲ್ಲಿ ತಮಗೆ ಇರುವ ಭಕ್ತಿ ನಿರ್ಭರತೆಯಿಂದ ತಮ್ಮ ಕಾವ್ಯಶಕ್ತಿಯನ್ನೆಲ್ಲ ಧಾರೆಯೆರೆದು "ವಚನವೇದ"ದ ಮಾಹಾತ್ಮ್ಯವನ್ನು ವರ್ಣಿಸಿದ್ದಾರೆ. ಅದನ್ನು ಪರಿಪೂರ್ಣವಾಗಿ ವರ್ಣಿಸಲು ಸಾಧ್ಯವಾಗದೆ ಕೊನೆಯಲ್ಲಿ: "ಇಷ್ಟು ಸರ್ವಜನ ಸಾಮಾನ್ಯ ರೂಪದಲ್ಲಿ ಇಷ್ಟು ಸರ್ವಸುಲಭ ರೂಪದಲ್ಲಿ ಭಗವಂತ ಎಂದೂ ಅವತರಿಸಿರಲಿಲ್ಲ" ಎಂದು ನಿಲ್ಲಿಸುತ್ತಾರೆ. ಮಹಾಕವಿ ಆ ಅವತಾರವರಿಷ್ಠರ ವಾಣಿಯನ್ನು ಪರಿಪೂರ್ಣವಾಗಿ ಯಥಾವತ್ತಾಗಿ ವರ್ಣಿಸಲಾರದೆ ಕೊನೆಗೆ ಅದು ಭಗವಂತನ ಅವತಾರ ಎಂದು ತೃಪ್ತಿಪಡಬೇಕಾಯ್ತು.

ಆದರೂ ಯಾವುದು ಮಾತು ಮನಗಳಿಂದ ಅತ್ತತ್ತ ಇದೆಯೊ ಅದನ್ನು ಮಾತಿನಿಂದ ಆಡಿಕೊಳ್ಳದೆ ಸಾಧಕರಿಗೆ ಬೇರೆ ದಾರಿಯಿಲ್ಲ. ಆದ್ದರಿಂದ ಕುವೆಂಪು ನಿಲ್ಲಿಸಿದ ಕಡೆಯಿಂದ ಅವರ ಮಾತನ್ನೇ ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ದು: "ಯಾರು ಇದನ್ನು ಓದುತ್ತಾರೆಯೊ ಅವರು ಸಾಕ್ಷಾತ್ ಪರಮಹಂಸರೊಡನೆ ಮಾತನಾಡುತ್ತಾರೆ; ಅಕ್ಷರಶಃ ಅನುಸಂಧಾನ ನಡೆಸುತ್ತಾರೆ. ಅವರೊಡನೆ ಒಂದಾಗುತ್ತಾರೆ" ಎಂದು ಸೇರಿಸಿದರೆ ಮುಂದಿನ ಮಾತಿಗೆ ಎಡೆಯೆಲ್ಲಿ? ಎಲ್ಲ ಸಾಧನೆಯ ಗುರಿಯೂ ಗಮ್ಯವೂ ಇದೇ ತಾನೆ? ಅದು ಸಿದ್ಧಿಸಿದರೆ ಇನ್ಯಾತರ ಸಾಧನೆ ಬೇಕು?

"ವಚನವೇದ"ವನ್ನು ಓದುವುದು "ಅಧ್ಯಯನಯೋಗ." ಧ್ಯಾನಯೋಗ, ಜ್ಞಾನ, ಭಕ್ತಿ, ಕರ್ಮಯೋಗಗಳಿಗಿಂತ ಸುಲಭ ಈ ವಚನವೇದಾಧ್ಯಯನ ಯೋಗ. ಎಲ್ಲ ಯೋಗಗಳ ಗುರಿಯೂ ಧ್ಯೇಯ ವಸ್ತುವಿನಲ್ಲಿ ಮನಸ್ಸು, ಬುದ್ಧಿ, ಚಿತ್ತ ಸಹಿತ ಸಕಲ ಕರಣೇಂದ್ರಿಯಗಳನ್ನು ಕೇಂದ್ರೀಕರಿಸಿ "ಅದನ್ನು" ಪಡೆದುಕೊಳ್ಳುವುದೆ ತಾನೆ? ಆ ತಾದಾತ್ಮ್ಯ ಈ ವಚನವೇದವನ್ನು ಓದುವುದರಿಂದ ಸುಲಭವಾಗಿ ಸಾಧ್ಯವಾಗುವುದಾದರೆ ಇದನ್ನು "ಅಧ್ಯಯನಯೋಗ" ಎಂದು ಕರೆಯುವುದರಲ್ಲಿ ಅನುಸರಿಸುವುದರಲ್ಲಿ ಸಂದೇಹವೇಕೆ?

ಧ್ಯಾನಸ್ಥರಾದಾಗ, ಧ್ಯಾನಮಗ್ನರಾದಾಗ ಧ್ಯೇಯವಸ್ತುವಿನಲ್ಲಿ ಕರಣೇಂದ್ರಿಯಗಳೆಲ್ಲ ಕೇಂದ್ರೀಕೃತವಾಗಿ ಬಾಹ್ಯಪ್ರಪಂಚಜ್ಞಾನ

ಶೂನ್ಯನಾಗುತ್ತಾನೆ ಎಂದು ಯೋಗಿಯ ಬಾಹ್ಯ ಲಕ್ಷಣವನ್ನು ಹೇಳುತ್ತಾರೆ. ಬಾಹ್ಯ ಪ್ರಜ್ಞಾಶೂನ್ಯತೆಯೇ ಪರವಸ್ತುವಿನೊಡನೆ ಒಂದಾಗಿ ಹೋಗು(ತಾದಾತ್ಮ್ಯ ಹೊಂದು)ವುದೇ ಒಂದು ಬಾಹ್ಯ ಲಕ್ಷಣ ಎಂಬುದಾದರೆ, "ವಚನವೇದ"ವನ್ನು ಓದುವುದರಿಂದ ಆ ಸ್ಥಿತಿಯನ್ನು ಸುಲಭವಾಗಿ ಏನೇನೂ ಕಷ್ಟವಿಲ್ಲದೆ—ಯಾವ ದೈಹಿಕ ಇಲ್ಲವೆ ಮಾನಸಿಕ ಶ್ರಮವಿಲ್ಲದೆ—ಪಡೆಯಬಹುದು. ಶ್ರೀರಾಮಕೃಷ್ಣರ ಮಾತುಗಳನ್ನೇ ನಿಶ್ಶಬ್ದವಾಗಿ ಕೇಳುವ ಏಕಾಗ್ರತೆ ಸಾಧ್ಯವಾಗುತ್ತದೆ. ಆಗ ಗುರುಮಹಾರಾಜರು ಅಕ್ಷರ ರೂಪದಿಂದ ಅಕ್ಷರಶಃ ನಮ್ಮ ಕಣ್ಮುಂದೆ ತಮ್ಮ ಚಿಕ್ಕ ಮಂಚದ ಮೇಲೆ ಕುಳಿತು ಕೊಂಡಿರುವುದನ್ನು ಕಾಣುತ್ತೇವೆ! ಅವರು ಆಗ—೧೫೦ ವರ್ಷಗಳ ಹಿಂದೆ ದಕ್ಷಿಣೇಶ್ವರದಲ್ಲಿ ಆ ಸಂವಾದರೂಪದಲ್ಲಿದ್ದ ಪರಮ ಹಂಸರು—ಈಗ ನಾವಿದ್ದಲ್ಲಿಗೆ ಬಂದು ನಮ್ಮೆದುರಿಗೇ ಕುಳಿತಿರು ವುದನ್ನು ಅನುಭವಿಸುತ್ತೇವೆ. ಇದು ಉತ್ಪ್ರೇಕ್ಷೆಯೂ ಅಲ್ಲ; ಅಲಂಕಾರವೂ ಅಲ್ಲ. ವಚನವೇದವನ್ನು ಶ್ರದ್ಧೆಯಿಟ್ಟು ಓದುವ ಎಲ್ಲರ ಅನುಭವ ಇದು. ಒಂದು ವೇಳೆ ಶ್ರದ್ಧೆ ಇಲ್ಲದೆ ಕೈಗೆತ್ತಿ ಕೊಂಡರೂ ಇದು ಶ್ರದ್ಧೆಯನ್ನು ಹುಟ್ಟಿಸಿ ಓದುಗನನ್ನು ಸೆರೆ ಹಿಡಿಯುತ್ತದೆ! ಇಂಥ ಕಾರುಣ್ಯಮಯಿ ಗುರು ಎಲ್ಲಿ ಸಿಕ್ಕಾರು?

ಈ ವಚನವೇದ ಅಧ್ಯಯನಯೋಗದಿಂದ ಪರಮಹಂಸ ರೊಡನೆ ಒಂದಾಗುತ್ತಾರೆ ಎಂಬುದಕ್ಕೆ ಗೀತಾಚಾರ್ಯನ ಭರ ವಸೆಯ ಅಭಯವಾಣಿಯೆ ಸಾಕ್ಷಿ. ಗೀತಾಚಾರ್ಯ ಅರ್ಜುನನಿಗೆ ಗೀತೋಪದೇಶ ಮಾಡಿ ಕೊನೆಯಲ್ಲಿ

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ |
ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ||
(೧೮ : ೭೦)

"ಯಾರು ಈ ಧರ್ಮಮಯವಾದ ನಮ್ಮಿಬ್ಬರ ಸಂವಾದರೂಪೀ ಗೀತೆಯನ್ನು ಓದುವನೊ (ಅಧ್ಯಯನ ಮಾಡುವನೊ) ಅವನಿಂದ ನಾನು ಜ್ಞಾನಯಜ್ಞದಿಂದ ಪೂಜಿಸಲ್ಪಡುವೆನು ಎಂದು ನನ್ನ ಮತ"— ಎಂದು ಸಾರಿರುವುದರ ಅರ್ಥವೂ ಇದೇ. ಆದರೆ ಒಂದು ವ್ಯತ್ಯಾಸ. ಗೀತಾಚಾರ್ಯ ಈ ಮೇಲಿನ ಅಭಯವಾಣಿಯನ್ನು ಸಾರುವುದಕ್ಕಿಂತ ಮೊದಲು ಗೀತಾಧ್ಯಯನಕ್ಕೆ ಓದುಗನಿಗೆ ಒಂದೆರಡು "ಅರ್ಹತೆ"ಗಳ ಶರ್ತುಗಳನ್ನು ವಿಧಿಸುತ್ತಾನೆ :"

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ |
ನ ಚಾಶುಶ್ರೂಷವೇ ವಾಚ್ಯಂ
ನ ಚ ಮಾಂ ಯೋಽಭ್ಯಸೂಯತಿ || (೧೮ : ೬೭)

"ತಪಸ್ಸು ಮಾಡದವನಿಗೂ, ಕೇಳಲು ಇಚ್ಛೆಯಿಲ್ಲದವನಿಗೂ, ದೋಷದೃಷ್ಟಿಯಿಂದ ನನ್ನನ್ನು ದೂಷಿಸುವವರಿಗೂ ಸಹ ಇದನ್ನು ಹೇಳಬಾರದು." (ಈ ದೋಷಗಳಿಲ್ಲದ ಭಕ್ತರಿಗೆ ಪ್ರೀತಿ ಉತ್ಸಾಹ ದಿಂದ ಹೇಳಬೇಕು.)

ವಚನವೇದಾಧ್ಯಯನ ಮಾಡುವ ಮೊದಲು ತಪಸ್ವಿಯಾಗಿರ ಬೇಕೆಂಬ ನಿರ್ಬಂಧವಿಲ್ಲ. ಇಚ್ಛೆಯೊಂದಿದ್ದರೆ ಸಾಕು. ಇದನ್ನು ಓದುವುದೇ ತಪಸ್ಸಾಗುವುದು!!

ಇಷ್ಟು ಸುಲಭವಾಗಿ, ಇಷ್ಟು ಅನಿರ್ಬಂಧವಾಗಿ ಯೋಗಾಭ್ಯಾಸ ಮಾಡುವ ಇನ್ನಾವ ದಾರಿಯಿದೆ? ಇಂಥ ನೇರ ಮಾರ್ಗಕ್ಕೆ ಮಹಾ ದ್ವಾರವನ್ನೇ ತೆರೆಯುತ್ತದೆ "ವಚನವೇದ". ಈ ಮಾತನ್ನು ದಿಟಪಡಿಸಿ ಕೊಳ್ಳಲು ಇಚ್ಛಿಸುವವರು ಒಮ್ಮೆ ಅದನ್ನು ಕೈಗೆತ್ತಿಕೊಂಡು, ಒಮ್ಮೆ ಕಣ್ಣಾಡಿಸಲಿ. ಆಗ ಗೊತ್ತಾಗುತ್ತದೆ. ತಾವೆಷ್ಟು ಭಾಗ್ಯವಂತರು ಎಂದು!

❖

## ಜಾಗತಿಕ ರಂಗದಲ್ಲಿ ವಚನವೇದ

ಕಳೆದ ವರ್ಷ (೧೯೪೮) ಅಮೆರಿಕ ಪುಸ್ತಕ ಭಂಡಾರ ಸಂಸ್ಥೆಯ "ಧಾರ್ಮಿಕ ಪುಸ್ತಕಗಳ ದುಂಡು ಮೇಜು" (Religious Books Round Table) ಇದನ್ನು (ವಚನವೇದವನ್ನು) ವರ್ಷದ "ಐವತ್ತು ಅಸಾಧಾರಣ ಧಾರ್ಮಿಕ ಪುಸ್ತಕಗಳಲ್ಲಿ ಒಂದು ಎಂದು ನಿರ್ಣಯಿಸಿತು. ಅದರ ಅಭಿಪ್ರಾಯದಲ್ಲಿ "ಈ ಪುಸ್ತಕವು ಆಧುನಿಕ ಹಿಂದೂ ಪ್ರವಾದಿಯ ತಥ್ಯಪೂರ್ಣ ಆಧ್ಯಾತ್ಮಿಕ ಜ್ಞಾನದ ಬಗ್ಗೆ ಆಳ ತಿಳಿವಳಿಕೆಯನ್ನು ಪಾಶ್ಚಾತ್ಯ (ಮತ್ತು ಪ್ರಾಚ್ಯ) ಓದುಗರಿಗೆ ನೀಡುತ್ತದೆ. ಸೂಕ್ಷ್ಮ ಮತ್ತು ಶಿಸ್ತಿನಿಂದ ಕೂಡಿದ ಅನುಭಾವಿಯೊಬ್ಬನ ಸತ್ಯದ ಆಧ್ಯಾತ್ಮಿಕ ನಿಕಟ ಅನುಭವಗಳನ್ನು ಇದರಲ್ಲಿ ಕಾಣಬಹುದು. ಎಲ್ಲ ಧರ್ಮಗಳ ಮೂಲಭೂತ ಸಮನ್ವಯತೆಯನ್ನು ಕುರಿತಂತೆ ಬೇರೆಲ್ಲಿಯೂ ಕಂಡುಬರದಂತಹ ಆಳ ಮತ್ತು ವಿಶಾಲ ತಿಳಿವಳಿಕೆಯನ್ನು ಇದರಲ್ಲಿ ಕಾಣುತ್ತೇವೆ. ಭಾರತದ ಯಥಾರ್ಥ ಆಧ್ಯಾತ್ಮಿಕ ಸಂಸ್ಕೃತಿಯ ಸುಸ್ಪಷ್ಟ ಚಿತ್ರವು ಇದರಲ್ಲಿ ಕಂಡುಬರುತ್ತದೆ. ದೈನಂದಿನ ಜೀವನಕ್ಕೆ ಸಂಬಂಧಪಟ್ಟಂತೆ ಹೊಸ ಆಧ್ಯಾತ್ಮಿಕ ದೃಷ್ಟಿಕೋನವನ್ನು ಕುರಿತಾದ ಉಪಯುಕ್ತ ಸಲಹೆಗಳು ಇದರಲ್ಲಿವೆ."

೧೯೪೮, ಸೆಪ್ಟೆಂಬರ್ ತಿಂಗಳಿನಲ್ಲಿ, ಇಡೀ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಅತ್ಯಂತ ಪ್ರಮುಖ ದೈನಿಕವಾದ "The New York Herald Tribune" ತನ್ನ ಸಾಪ್ತಾಹಿಕ ಪುಸ್ತಕ ವಿಮರ್ಶೆ ವಿಭಾಗದ ಇಪ್ಪತ್ತೈದನೆಯ ವರ್ಷದ ಬೆಳ್ಳಿಹಬ್ಬವನ್ನು ಆಚರಿಸಿತು. ಇದಕ್ಕೆ ಸಂಬಂಧಪಟ್ಟಂತೆ, ದೇಶದ ಅನೇಕ ಪ್ರಮುಖ ವಿದ್ವಾಂಸರನ್ನು ಈ ಇಪ್ಪತ್ತೈದು ವರ್ಷಗಳಲ್ಲಿ ಪ್ರಕಟವಾದ ಮೂರು ಅವಿಸ್ಮರಣೀಯ ಪುಸ್ತಕಗಳನ್ನು ಹೆಸರಿಸಬೇಕೆಂದು ಕೇಳಿಕೊಳ್ಳಲಾಯಿತು. ಪ್ರಖ್ಯಾತ ಸಾಹಿತಿಯೂ ಮತ್ತು ವಿಮರ್ಶಕರೂ ಆದ ಥಾಮಸ್ ಸಗ್ರೂ (Thomas Sugrue) ಅವರು *The Gospel of Sri Ramakrishna* ಪುಸ್ತಕವು ಕಳೆದ ಕಾಲು ಶತಮಾನದಲ್ಲಿ ಪ್ರಕಟವಾದ ದಾರ್ಶನಿಕ ಗ್ರಂಥಗಳಲ್ಲಿ ಅತ್ಯಂತ ಪ್ರಮುಖವಾದುದೆಂದು ಸೂಚಿಸಿದರು. ಉಳಿದ ಎರಡು ಪುಸ್ತಕಗಳು ಯಾವುವೆಂದರೆ : ಜೇಮ್ಸ್ ಜಾಯ್ಸ್‌ರವರ "Ulyses" ಮತ್ತು ಆರ್ನಾಲ್ಡ್ ಟಾಯ್ನ್‌ಬಿಯವರ "A Study of History".